# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :647 |
| 2. | ವಿಧಾನ ಪರಿಷತ್ತಿನ ಸದಸ್ಯರ ಹೆಸರು | :ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | : 18.08.2025 |
| 4. | ಉತ್ತರಿಸುವ ಸಚಿವರು | :ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 05 ವರ್ಷಗಳಿಂದ ಇಲ್ಲಿಯವರೆಗೂ ಗ್ರಾಹಕರ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆಯೆಷ್ಟು; ಇದರಲ್ಲಿ ಎಷ್ಟು ಪ್ರಕರಣಗಳು ಇತ್ಯರ್ಥವಾಗಿದೆ; ಎಷ್ಟು ಬಾಕಿ ಉಳಿದಿದೆ; | ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳಲ್ಲಿ ಕಳೆದ 05 ವರ್ಷಗಳಿಂದ ದಾಖಲಾಗಿರುವ, ಇತ್ಯರ್ಥಗೊಂಡಿರುವ ಹಾಗೂ ಬಾಕಿಯಿರುವ ಪ್ರಕರಣಗಳ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| ಆ) | ಗ್ರಾಹಕರ ನ್ಯಾಯಾಲಯಗಳಿಂದ ಗ್ರಾಹಕರ ಪರವಾಗಿ ಆದೇಶ ಮಾಡಿರುವ ಎಲ್ಲಾ ಪ್ರಕರಣಗಳು ಜಾರಿಯಾಗಿವೆಯೇ; (ದಾಖಲಾಗಿರುವ ಪ್ರಕರಣಗಳ ವಿವರಗಳನ್ನು ಒದಗಿಸುವುದು) | ಗ್ರಾಹಕರ ನ್ಯಾಯಾಲಯಗಳಲ್ಲಿ ಗ್ರಾಹಕರ ಪರ ಆದೇಶವಾಗಿರುವ ಪ್ರಕರಣಗಳಲ್ಲಿ ಆದೇಶವು ಜಾರಿಯಾದ ಬಗ್ಗೆ ಪಕ್ಷಕಾರರು ಗ್ರಾಹಕ ಆಯೋಗಕ್ಕೆ ಮಾಹಿತಿ ನೀಡದ ಹೊರತು ಎಲ್ಲಾ ಆದೇಶಗಳು ಜಾರಿಯಾಗಿವೆ ಎಂಬುದರ ಬಗ್ಗೆ ಮಾಹಿತಿಯು ಲಭ್ಯವಿರುವುದಿಲ್ಲ.<br><br>ಸಾಮಾನ್ಯವಾಗಿ ಗ್ರಾಹಕ ಆಯೋಗಗಳಲ್ಲಿ ಆದೇಶವಾಗಿ, ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆಯಾಗಿರುವ ಪ್ರಕರಣಗಳು ಹಾಗೂ ಗ್ರಾಹಕ ಆಯೋಗಗಳ ಆದೇಶದ ಕುರಿತು ಅಮಲ್ಜಾರಿ ಅರ್ಜಿ ದಾಖಲಾಗದಿರುವ ಪ್ರಕರಣಗಳಲ್ಲಿ ಗ್ರಾಹಕ ಆಯೋಗಗಳ ಆದೇಶಗಳ ಜಾರಿಯಾಗಿರುತ್ತದೆ.<br><br>ರಾಜ್ಯ ಆಯೋಗ ಹಾಗೂ ಜಿಲ್ಲಾ ಆಯೋಗಗಳಲ್ಲಿ ದಿನಾಂಕ: 30.06.2025 ರ ಅಂತ್ಯಕ್ಕೆ ಇತ್ಯರ್ಥವಾಗಿರುವ ಫಿರ್ಯಾದುಗಳ ಪೈಕಿ ಗ್ರಾಹಕರ ಪರವಾಗಿ ಇತ್ಯರ್ಥವಾಗಿರುವ ಫಿರ್ಯಾದುಗಳು ಅದರ ಜಾರಿ ಸಂಬಂಧ ದಾಖಲಾಗಿರುವ ಹಾಗೂ ಇತ್ಯರ್ಥವಾಗಿರುವ ಅಮಲ್ಜಾರಿ ಅರ್ಜಿಗಳ ವಿವರವನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. |
| ಇ) | ಶೇ.10 ಕ್ಕೂ ಅಧಿಕ ಪ್ರಕರಣಗಳಲ್ಲಿ ಗ್ರಾಹಕರ ನ್ಯಾಯಾಲಯಗಳ ಆದೇಶ ಜಾರಿಯಾಗದ ಹಿನ್ನಲೆಯಲ್ಲಿ ಗ್ರಾಹಕರು ಆ ಆದೇಶಗಳ ಜಾರಿಗೆ ಪೊಲೀಸರ ಮೊರೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗ್ರಾಹಕರ ಆಯೋಗಗಳ ಆದೇಶವು ಜಾರಿಯಾಗದ ಸಂದರ್ಭದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ 2019 ರ ಕಲಂ 71 ಅಥವಾ 72 ರಲ್ಲಿ ಕಲ್ಪಿಸಿರುವ ಅವಕಾಶದಂತೆ ಸಂಬಂಧಪಟ್ಟ ಆಯೋಗಗಳ ಮುಂದೆ ಅಮಲ್ಜಾರಿ ಅರ್ಜಿಗಳನ್ನು ದಾಖಲಿಸಿಕೊಳ್ಳಬಹುದಾಗಿರುತ್ತದೆ. ಇದನ್ನು ಹೊರತುಪಡಿಸಿ ಆಯೋಗಗಳ ಆದೇಶವು ಪಾಲನೆ/ ಜಾರಿಯಾಗದ ಕುರಿತು ಗ್ರಾಹಕರ ಪೊಲೀಸ್ ಮೊರೆ ಹೋಗಲು ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ. |

| | | |
|---|---|---|
| ಈ) | ವಸತಿ ನಿವೇಶನದ ಹಾಗೆ ಪ್ಲ್ಯಾಟ್ ನೀಡುವಂತೆ ಆಮಿಷವೊಡ್ಡುವ ಗೃಹ ನಿರ್ಮಾಣ ಸಹಕಾರ ಸಂಘಗಳು, ದೋಷಪೂರಿತ ಉತ್ಪನ್ನಗಳನ್ನು ನೀಡಿರುವ ಪ್ರಮುಖ ಕಾರ್ಪೊರೇಟ್ ಸಂಸ್ಥೆಗಳ ವಿರುದ್ಧದ ಪ್ರಕರಣಗಳು ಹೆಚ್ಚಾಗಿರುವುದು ನಿಜವೇ? (ಪೂರ್ಣ ಮಾಹಿತಿಯನ್ನು ಒದಗಿಸುವುದು) | ಹೌದು. ಗ್ರಾಹಕರ ನ್ಯಾಯಾಲಯಗಳ ವಿವಿಧ ಸೇವಾ ಕ್ಷೇತ್ರಗಳ ಕುರಿತಾದ ಪ್ರಕರಣಗಳು ದಾಖಲಾಗುತ್ತಿದ್ದು, ರಾಜ್ಯ ಆಯೋಗ ಹಾಗೂ ಜಿಲ್ಲಾ ಆಯೋಗಗಳಲ್ಲಿನ ವಸತಿ/ನಿವೇಶನ/ಪ್ಲಾಟ್ ಕುರಿತಾದ ಪ್ರಕರಣಗಳ ವಿವರವು ಮತ್ತು ಕಾರ್ಪೊರೇಟ್ ಸಂಸ್ಥೆಗಳ ವಿರುದ್ಧದ ಪ್ರಕರಣಗಳು ಹೆಚ್ಚಾಗಿದ್ದು, ಮಾಹಿತಿಯನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ.<br><br>ಆದಾಗ್ಯೂ, ವಸತಿ/ನಿವೇಶನ ಹಾಗೂ ಪ್ಲಾಟ್ ಕುರಿತಂತೆ ಪ್ರತ್ಯೇಕ ಮಾಹಿತಿ/ದತ್ತಾಂಶ ಲಭ್ಯವಿರುವುದಿಲ್ಲ. ಹಾಗೂ ದೋಷಪೂರಿತ ಉತ್ಪನ್ನಗಳನ್ನು ನೀಡಿರುವ ಪ್ರಮುಖ ಕಾರ್ಪೊರೇಟ್ ಸಂಸ್ಥೆಗಳ ವಿರುದ್ಧ ಪ್ರಕರಣಗಳು ಹೆಚ್ಚಾಗಿರುವುದರ ಕುರಿತಾಗಿ, ಗ್ರಾಹಕರ ನ್ಯಾಯಾಲಯಗಳಲ್ಲಿ ಆಯಾ ಸೇವಾಕ್ಷೇತ್ರದಲ್ಲಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ವರ್ಗಾವಾರು ಮಾಹಿತಿ/ದತ್ತಾಂಶ ಲಭ್ಯವಿದ್ದು, ಕಾರ್ಪೊರೇಟ್ ಸಂಸ್ಥೆಗಳ ಕುರಿತಾಗಿಯೇ ಪ್ರತ್ಯೇಕ ಮಾಹಿತಿ ಲಭ್ಯವಿರುವುದಿಲ್ಲ. |

ಸಂಖ್ಯೆ: ಇ-ಆನಾಸ 97 ಸಲಫ 2025 (1867117)

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳು ಹಾಗೂ
ಕಾನೂನು ಮಾಪನಶಾಸ್ತ್ರ, ಸಚಿವರು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 647**

**ಅನುಬಂಧ-1**

| ಆಯೋಗದ ಹೆಸರು | ವರ್ಷ | ದಾಖಲಾದ ಪ್ರಕರಣಗಳು | ಇತ್ಯರ್ಥವಾಗಿರುವ ಪ್ರಕರಣಗಳು | ನಮೂದಿಸಿರುವ ಅವಧಿಯಲ್ಲಿ ಬಾಕಿಯಿರುವ ಪ್ರಕರಣಗಳು |
|---|---|---|---|---|
| ರಾಜ್ಯ ಆಯೋಗ (ಮೇಲ್ಮನವಿಗಳು) | 2021 | 1145 | 888 | 257 |
| | 2022 | 2549 | 1731 | 818 |
| | 2023 | 2495 | 969 | 1526 |
| | 2024 | 3379 | 565 | 2814 |
| | 2025 | 967 | 33 | 934 |
| | **ಒಟ್ಟು** | **10535** | **4186** | **6349** |
| ರಾಜ್ಯ ಆಯೋಗ (ಫಿರ್ಯಾದುಗಳು) | 2021 | 102 | 56 | 46 |
| | 2022 | 238 | 137 | 101 |
| | 2023 | 117 | 47 | 70 |
| | 2024 | 96 | 8 | 88 |
| | 2025 | 29 | 3 | 26 |
| | **ಒಟ್ಟು** | **582** | **251** | **331** |
| ಜಿಲ್ಲಾ ಆಯೋಗಗಳು (ಒಟ್ಟು 33) | 2021 | 5755 | 5631 | 124 |
| | 2022 | 6170 | 5965 | 205 |
| | 2023 | 7231 | 6625 | 606 |
| | 2024 | 8232 | 5341 | 2891 |
| | 2025 | 3569 | 386 | 3183 |
| | **ಒಟ್ಟು** | **30957** | **23948** | **7009** |

## ಅನುಬಂಧ-2

| ರಾಜ್ಯ/ಜಿಲ್ಲಾ ಆಯೋಗ | ಇತ್ಯರ್ಥ ವಾಗಿರುವ ಫಿರ್ಯಾದುಗಳು | ಗ್ರಾಹಕರ ಪರ ಇತ್ಯರ್ಥವಾಗಿರುವ ಪ್ರಕರಣಗಳು | ದಾಖಲಾಗಿರುವ ಅಮಲ್ಜಾರಿ ಅರ್ಜಿಗಳು | ಇತ್ಯರ್ಥ ವಾಗಿರುವ ಅಮಲ್ಜಾರಿ ಅರ್ಜಿಗಳು | ಬಾಕಿ ಯಿರುವ ಅಮಲ್ಜಾರಿ ಅರ್ಜಿಗಳು |
|---|---|---|---|---|---|
| ರಾಜ್ಯ ಆಯೋಗ (ಫಿರ್ಯಾದು) | 7385 | 4084 | 1805 | 1205 | 600 |
| ಜಿಲ್ಲಾ ಆಯೋಗ (ಫಿರ್ಯಾದು) | 244519 | 144133 | 65567 | 55306 | 10261 |

## ಅನುಬಂಧ-3

| ರಾಜ್ಯ ಆಯೋಗ/ ಜಿಲ್ಲಾ ಆಯೋಗ | ದಿನಾಂಕ: 30.06.2025 ರ ಅಂತ್ಯಕ್ಕೆ ದಾಖಲಾಗಿರುವ ಒಟ್ಟು ಪ್ರಕರಣಗಳು | ದಿನಾಂಕ: 30.06.2025 ರ ಅಂತ್ಯಕ್ಕೆ ದಾಖಲಾಗಿರುವ ಒಟ್ಟು ಪ್ರಕರಣಗಳು | ದಾಖಲಾಗಿರುವ ಹಾಗೂ ಇತ್ಯರ್ಥವಾಗಿರುವ ಒಟ್ಟು ಪ್ರಕರಣಗಳಲ್ಲಿ ವಸತಿ/ನಿವೇಶನ/ಪ್ಲಾಟ್ ಕುರಿತುಂತೆ | |
|---|---|---|---|---|
| | | | ದಾಖಲಾಗಿರುವ ಪ್ರಕರಣಗಳು | ಇತ್ಯರ್ಥವಾಗಿರುವ ಪ್ರಕರಣಗಳು |
| **ರಾಜ್ಯ ಆಯೋಗ**: | | | | |
| ಮೇಲ್ಮನವಿಗಳು | 66637 | 57831 | 11290 | 9671 |
| ಫಿರ್ಯಾದುಗಳು | 8622 | 7385 | 4111 | 3079 |
| **ಜಿಲ್ಲಾ ಆಯೋಗ** | | | | |
| ಫಿರ್ಯಾದುಗಳು | 251766 | 244519 | 24426 | 23785 |